**ಕರ್ನಾಟಕ ಸರ್ಕಾರ**
**(ನೋಂದಣಿ ಮತ್ತು ಮುದ್ರಾಂಕ ಇಲಾಖೆ)**

**ಸಂಖ್ಯೆ: Comp /110/2020-21**

ನೋಂದಣಿ ಮಹಾ ಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರಕಛೇರಿ,
8ನೇ ಮಹಡಿ, ಕಂದಾಯಭವನ,
ಕೆಂಪೇಗೌಡರಸ್ತೆ, ಬೆಂಗಳೂರು –09,
ದಿನಾಂಕ: 10 –12–2021.

**ಇವರಿಗೆ,**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಇ–ಆಡಳಿತ) ಕೊಠಡಿ ಸಂಖ್ಯೆ:106,
1ನೇ ಮಹಡಿ, 2ನೇ ಗೇಟ್, ಬಹುಮಹಡಿಗಳ ಕಟ್ಟಡ,
ಬೆಂಗಳೂರು– 560 001

**ಮಾನ್ಯರೆ,**

**ವಿಷಯ:** Kaveri-Block chain ಸಂಯೋಜಿತ ತಂತ್ರಾಂಶವನ್ನು ಪೈಲಟ್ ಆಧಾರದ ಮೇಲೆ ಹೆಚ್ಚುವರಿಯಾಗಿ 04 ಉಪನೋಂದಣಿ ಕಛೇರಿಗಳಲ್ಲಿ ಅಳವಡಿಸುವ ಕುರಿತು.

**ಉಲ್ಲೇಖ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ :ಕಂಇ 40 ಮುನೋಮು 2017, ದಿನಾಂಕ: 05–01–2021.
2. ಈ ಕಛೇರಿಯ ಸಮ ಸಂಖ್ಯೆ ಪತ್ರ ದಿನಾಂಕ: 10–08–2021.
3. ಸರ್ಕಾರದ ಅಧಿಸೂಚನೆ ಸಂಖ್ಯೆ :ಕಂಇ 40 ಮುನೋಮು 2017, ದಿನಾಂಕ: 21–08–2021.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇ–ಆಡಳಿತ ಇವರ ಪತ್ರ ಸಂಖ್ಯೆ: DPAR (e-Gov) 336 ACS 2021, ದಿನಾಂಕ:01–12–2021.
5. ಈ ಕಛೇರಿಯ ಸಮ ಸಂಖ್ಯೆ ಪತ್ರ ದಿನಾಂಕ: 06–12–2021.
6. ಸರ್ಕಾರದ ಪತ್ರ ಸಂಖ್ಯೆ: ಕಂಇ/118/ಎಂಎನ್ಎಂಯು/2021, ದಿನಾಂಕ:09–12–2021.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, Kaveri-Block chain ಸಂಯೋಜಿತ ತಂತ್ರಾಂಶವನ್ನು ಗುಬ್ಬಿ ಹಾಗೂ ಜಗಳೂರು ಉಪನೋಂದಣಿ ಕಛೇರಿಗಳಲ್ಲಿ ಪೈಲಟ್ ಆಧಾರದ ಮೇಲೆ ಯಶ್ವಸಿಯಾಗಿ ಅಳವಡಿಸಲಾಗಿರುವುದರಿಂದ ಸದರಿ ಸಂಯೋಜಿತ ತಂತ್ರಾಂಶವನ್ನು ಹೆಚ್ಚುವರಿಯಾಗಿ 04 ಉಪನೋಂದಣಿ ಕಛೇರಿಗಳಲ್ಲಿ ಅಳವಡಿಸಲು ಕಛೇರಿಗಳ ಹೆಸರನ್ನು ಸೂಚಿಸಬೇಕಾಗಿ ತಿಳಿಸಿರುವುದು ಸರಿಯಷ್ಟೇ.

ಈ ಸಂಬಂಧ Kaveri-Block chain ಸಂಯೋಜಿತ ತಂತ್ರಾಂಶವನ್ನು ಕುಂದಾಪುರ, ಶಿಡ್ಲಘಟ್ಟ, ಶಿರಸಿ ಹಾಗೂ ಹೊಸದುರ್ಗ ಉಪನೋಂದಣಿ ಕಛೇರಿಗಳಲ್ಲಿ ಅಳವಡಿಸಲು ಉಲ್ಲೇಖ(5)ರ ಪತ್ರದಲ್ಲಿ ಸರ್ಕಾರವನ್ನು ಕೋರಲಾಗಿ, ಈ ಕುರಿತು ಇಲಾಖೆಯ ಹಂತದಲ್ಲೇ ಸೂಕ್ತ ಕ್ರಮ ಕೈಗೊಳ್ಳಲು ಉಲ್ಲೇಖ(6)ರ ಪತ್ರದಲ್ಲಿ ಸರ್ಕಾರವು ತಿಳಿಸಿರುತ್ತದೆ.

ಆದುದರಿಂದ Kaveri-Block chain ಸಂಯೋಜಿತ ತಂತ್ರಾಂಶವನ್ನು ಕುಂದಾಪುರ, ಶಿಡ್ಲಘಟ್ಟ, ಶಿರಸಿ ಹಾಗೂ ಹೊಸದುರ್ಗ ಉಪನೋಂದಣಿ ಕಛೇರಿಗಳಲ್ಲಿ ಪೈಲಟ್ ಆಧಾರದ ಮೇಲೆ ಅಳವಡಿಸಲು ಹಾಗೂ ಇದಕ್ಕೆ ಅಗತ್ಯವಿರುವ ಹಾರ್ಡವೇರ್ ಉಪಕರಣಗಳನ್ನು ಸದರಿ ಕಛೇರಿಗಳಿಗೆ ಒದಗಿಸಲು ಈ ಮೂಲಕ ಕೋರಿದೆ.

**ತಮ್ಮ ವಿಶ್ವಾಸಿ,**

10.12.21

**ನೋಂದಣಿ ಮಹಾಪರಿವೀಕ್ಷಕರು ಮತ್ತು**
**ಮುದ್ರಾಂಕಗಳ ಆಯುಕ್ತರು, ಬೆಂಗಳೂರು.**

**ಪ್ರತಿಯನ್ನು:**

1. ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ, (ವಿಪತ್ತು ನಿರ್ವಹಣೆ, ಭೂಮಿ ಮತ್ತು ಯು.ಪಿ.ಒ.ಆರ್ ) ಬಹುಮಹಡಿಕಟ್ಟಡ, ಡಾ॥ ಅಂಬೇಡ್ಕರ್ ವೀದಿ, ಬೆಂಗಳೂರು– 560 001 ರವರಿಗೆ ಮಾಹಿತಿಗಾಗಿ.

2. ಕಾರ್ಯಕ್ರಮ ನಿರ್ದೇಶಕರು, ಯೋಜನಾ ನಿರ್ದೇಶಕರು, ಸೆಕ್ಲಾನ್ 2.0, ಇ–ಆಡಳಿತ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ.